

ಇಮಾಂ ರೆಝಾ ದರ್ಗಾ, ಮಶಾದ್

ಪೈಗಂಬರರ ಬಳಿಕ ಬಂದ ಖಲೀಫರನ್ನು ಒಪ್ಪದೆ, ತಮ್ಮದೇ 12 ಇಮಾಮರನ್ನು ಸಾಂಸ್ಕೃತಿಕ ನಾಯಕರೆಂದು ಪರಿಭಾವಿಸುತ್ತಾರೆ. ಹೀಗೆಂದೇ ಕೆಲವು ಸಂಪ್ರದಾಯವಾದಿ ಸುನ್ನಿಗಳು ಶಿಯಾಗಳನ್ನು ಮುಸ್ಲಿಮರೆಂದೇ ಒಪ್ಪುವುದಿಲ್ಲ. ಅರಬರ ಇಸ್ಲಾಂ ನಿಷೇಧಿಸಿಕೊಂಡ ಚಿತ್ರಕಲೆ ಶಿಲ್ಪಕಲೆ ಇರಾನಿನಲ್ಲಿ ಸಮೃದ್ಧವಾಗಿವೆ.

ನಮಗೆ ಅರಮನೆ ಇರುವ ಇಸ್ಪಹಾನ್, ರೂಮಿಯ ಗುರುವಿನ ತಬ್ರೀಜ್, ಪ್ರಾಚೀನ ಅರಮನೆಯಿರುವ ಗೋಲಸ್ತಾನ್ ನೋಡಬೇಕೆಂದು ಹಂಬಲವಿತ್ತು. ಆದರೆ ನೋಡಲು ಸಾಧ್ಯವಾಗಿದ್ದು ತೆಹರಾನ್, ಮಶಾದ್, ಖೋಂ, ನಿಶಾಪುರಿ, ಬಸ್ತಾಮ್ ನಗರಗಳನ್ನು ಮಾತ್ರ. ಮಶಾದ್ ಚಾರಿತ್ರಿಕ ಮಹತ್ವದ ವ್ಯಾಪಾರಿ ನಗರ. ಅಲ್ಲಿ ತೆಹರಾನಿನ ಆಧುನಿಕ ಬೆಡಗು ಬಿನ್ನಾಣವಿಲ್ಲ. ಅದೊಂದು ವ್ಯಾಪಾರ ಮತ್ತು ಸಂಸ್ಕೃತಿಯ ಕೇಂದ್ರ. ಹಿಂದೆ ಚೀನಾದಿಂದ ಇಟಲಿಗೆ ಹೋಗುತ್ತಿದ್ದ ಸಿಲ್ಕ್‌ರೂಟಿನ ನಗರವಾದ ಕಾರಣ, ಅದರೊಳಗೆ ಕಾಸ್ಮೊಪಾಲಿಟನ್ ಗುಣಗಳಿವೆ. ನಗರದ ಬೀದಿಗಳಲ್ಲಿ ಉದ್ದಕ್ಕೂ ಕೇಸರಿ, ಹಣ್ಣು ಮತ್ತು ಸಿಹಿತಿನಿಸಿನ ಅಂಗಡಿಗಳು. ಈ ಭಾಗದ ಕೇಸರಿಗೆ ಬಹಳ ಬೆಲೆ. ನಗರದ ಮಧ್ಯಭಾಗದಲ್ಲಿ ನೀರಿನ ಚೀಲ ಹೊತ್ತ ಮುದುಕನ ಪ್ರತಿಮೆಯಿತ್ತು. ಎಲ್ಲ ಮರುಭೂಮಿ ನಾಡುಗಳಲ್ಲಿ ನೀರು ಜೀವಜಲ. ಅದನ್ನು ವಿತರಿಸುವುದು ಪುಣ್ಯದ ಕೆಲಸ.

ಇರಾನಿನ ಆಧುನಿಕತೆ ಕೈಗಾರಿಕೀಕರಣ 40 ವರ್ಷಗಳ ನಿರ್ಬಂಧ ಸ್ವಾವಲಂಬನೆಗೆ ಕಾರಣವಾಗಿದೆ. ಇದರ ಹಿಂದೆ ಚೀನಾ ರಷ್ಯಾದ ಬೆಂಬಲವಿದೆ. ಇರಾನ್ ರಷ್ಯಾ ಸ್ನೇಹದ ಫಲಕಗಳನ್ನು ನಿಶಾಪುರದಲ್ಲಿ ನೋಡಿದೆವು. ಇರಾನಿನಲ್ಲಿ ಐತಿಹಾಸಿಕ ಮಹತ್ವದ ಸ್ಥಳಗಳು ಬಹಳ ಇವೆ. ಜಾಗತಿಕ ನಿರ್ಬಂಧಗಳಿಂದ ಇರಾನ್ ಪ್ರವಾಸೋದ್ಯಮ ಹಿಂದುಳಿದಿದೆ. ಅಂತಾರಾಷ್ಟ್ರೀಯ ನಿರ್ಬಂಧಗಳಿಂದ ಕಟ್ಟಿರುವುದು ಕಾಣುತ್ತಿತ್ತು. ಇಂಗ್ಲಿಷಿಲ್ಲದ ಕಾರಣಕ್ಕೆ ಜಾಗತಿಕ ಸಂಬಂಧಗಳ ವಿಷಯದಲ್ಲಿ ಏಕಾಕಿತನವಿದೆ. ಆದರೆ ಫಾರಸಿಯಲ್ಲಿ ಎಲ್ಲವನ್ನು ಅಭಿವ್ಯಕ್ತಿಸುತ್ತ ಇರಾನ್ ತನ್ನ ವಿಶಿಷ್ಟತೆ ಕಾದುಕೊಂಡಿದೆ. ಪುಸ್ತಕದಗಂಡಿಗಳಲ್ಲಿ ಫಾರಸಿ ಭಾಷೆಯ ಪುಸ್ತಕಗಳು ರಾಶಿರಾಶಿ ಕಂಡವು. ರೈಲು ನಿಲ್ದಾಣದಲ್ಲೂ



ಧಾರ್ಮಿಕ ಸ್ಥಳಗಳಲ್ಲಿ ಚಹಾ ದಾಸೋಹ

ದೊಡ್ಡ ಪುಸ್ತಕ ಮಳಿಗೆಯಿತ್ತು. ಇರಾಕಿಗೆ ಹೋಲಿಸಿದರೆ, ಅಮೆರಿಕದ ವೈರ ಕಟ್ಟಿಕೊಂಡ ಇರಾನಿನಲ್ಲಿ ಹೆಚ್ಚಿನ ಆಧುನಿಕತೆ ಪ್ರಗತಿ ಕಂಡಿತು. ನಾವು ಮಶಾದ್‌ನಿಂದ ತೆಹರಾನಿಗೆ ಪಯಣಿಸಿದ ರೈಲು, ಇರಾನ್ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಪ್ರಗತಿ ಸಾಧಿಸಿರುವ ಸಾಧನೆಯ ಪ್ರತೀಕವಾಗಿತ್ತು. ರೈಲ್ವೆ ನಿಲ್ದಾಣ ಏರ್‌ಪೋರ್ಟಿನಂತಿತ್ತು. ಇರಾನಿನ ರಸ್ತೆಗಳು ಉತ್ಕೃಷ್ಟ ಮಟ್ಟದವಾಗಿದ್ದವು. ಹತ್ತು ದಿನಗಳ ತಿರುಗಾಟದಲ್ಲಿ ನಮಗೆ ಕಂಡದ್ದು ಇಬ್ಬರು ಭಿಕ್ಷುಕರು ಮಾತ್ರ. ಒಬ್ಬ ಮುದುಕಿ. ಮತ್ತೊಬ್ಬ ಭಿಕ್ಷುಕ ಕುರುಡ, ತೂಕದ ಯಂತ್ರ ಇರಿಸಿಕೊಂಡು ಫುಟ್‌ಪಾತಿನಲ್ಲಿ ಕೂತಿದ್ದ. ಅವನು ಭಿಕ್ಷೆ ಬೇಡುತ್ತಿರಲಿಲ್ಲ. ತೂಕ ಮಾಡಿಸಿಕೊಂಡವರಿಂದ ಸಂಭಾವನೆ ಪಡೆಯುತ್ತಿದ್ದ.

ಸಂಪತ್ತಿಗಾಗಿ ರಾಜಕೀಯ ಭಿನ್ನಮತಕ್ಕಾಗಿ ಏರ್ಪಡುವ ಯುದ್ಧಗಳು ದೇಶಗಳನ್ನು ಅಲ್ಲಿನ ಸಂಪತ್ತಿನ ಮೂಲಕ, ಮಿಲಿಟರಿ ಬಲಾಬಲಗಳ ಮೂಲಕ ನೋಡುತ್ತವೆ. ಸಾಹಿತ್ಯ ದರ್ಶನ ಸಂಗೀತ ಸಂಸ್ಕೃತಿ ಜನಜೀವನ ಪ್ರಕೃತಿಯ ಮೂಲಕವಲ್ಲ. ಮೊದಲನೆಯದು ವ್ಯಾಪಾರಿ ನೋಟ. ಎರಡನೆಯದು ಸಾಂಸ್ಕೃತಿಕ ನೋಟ. ದೇಶಗಳನ್ನು ಸಾಂಸ್ಕೃತಿಕ ನೋಟಗಳ ಮೂಲಕ ಅರ್ಥ ಮಾಡಿಕೊಂಡರೆ, ಜೀವಘಾತಕವಾದ ಯುದ್ಧಗಳನ್ನು ಮಾಡುವುದು ಕಷ್ಟಕರವಾಗುತ್ತದೆ. ಸಾಮಾನ್ಯ ಜನರು, ದೇಶಗಳನ್ನು ಜನರ ಮೂಲಕ ನೋಡುತ್ತಾರೆ. ಯುದ್ಧದಾಹಿಗಳು ದೇಶಗಳನ್ನು ಮಾರುಕಟ್ಟೆ ಮತ್ತು ಸಂಪತ್ತಿನ ಮೂಲಕ ನೋಡುತ್ತವೆ. ಅವಕ್ಕೆ ಜನರು ಗ್ರಾಹಕರಾಗಿ ತೋರುತ್ತಾರೆ. ಈಗ ನಡೆಯುತ್ತಿರುವ ಯುದ್ಧವು ಧರ್ಮಯುದ್ಧವಲ್ಲ. ಹಿಂದಿನ ಕಾಲದಲ್ಲಿ ರಾಜರು ತಮ್ಮ ಸೈನಿಕ ಬಲದಿಂದ ಸಂಪತ್ತನ್ನು ಕೊಳ್ಳೆ ಹೊಡೆಯಲು ಮಾಡುತ್ತಿದ್ದ ಯುದ್ಧಗಳ ಆಧುನಿಕ ರೂಪದ ಯುದ್ಧವಾಗಿದೆ. ಬಲಿಷ್ಠರು, ಆಕ್ರಮಣಕಾರಿಗಳು ಗೆಲ್ಲಬಹುದು. ಆದರೆ ಏನೂ ತಪ್ಪು ಮಾಡದ ಸಾಮಾನ್ಯ ಜನರ, ಪಶುಪಕ್ಷಿಗಳ, ನದಿಗಳ, ಕಾಡುಗಳ ಬದುಕು ಹೈರಾಣಗೊಳ್ಳುತ್ತದೆ.